# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರ:420/2025**

**ಸಿ.ಡಬ್ಲ್ಯೂ: 1, ಪಿ.ಡಬ್ಲ್ಯೂ: 1**

ಸಾಕ್ಷಿದಾರರ ಹೆಸರು : ಮಮ್ತಾಜ್ ಬಾನು

ಗಂಡನ ಹೆಸರು : ಮೊಹಮದ್ ಜಾಪರ್

ವಯಸ್ಸು : 63 ವರ್ಷ

ಉದ್ಯೋಗ : ಮನೆಗೆಲಸ

ವಾಸ್ತವ್ಯ : ಮದೀನಾ ಕಾಲನಿ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 17/11 /2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ಸದರಿ ಪ್ರಕರಣದಲ್ಲಿ ನಾವು ರಾಜೀ ಆಗಿರುತ್ತೇವೆ. ಕಾರಣ ನನಗೆ ಸದರಿ ಪ್ರಕರಣದ ನಡೆಸಲು ಇಚ್ಛೆ ಇಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 09.06.2020 ರಂದು ರಾತ್ರಿ 10.45 ಗಂಟೆಗೆ ನನ್ನ ಮಗ ನಮ್ಮ ಮನೆಯ ಕಂಪೌಂಡಿನ ಒಳಗಡೆ ಮೀನು ತುಂಬುತ್ತಿದ್ದಾಗ ಸದರಿ ಪ್ರಕರಣದ ಆರೋಪಿತರು ನನ್ನ ಮಗನನ್ನು ಮನೆ ಕಂಪೌಂಡಿನಿಂದ ಹೊರಗಡೆ ಕರೆದು ನಮ್ಮ ವಿರುದ್ದ ಮೀನು ವ್ಯಾಪಾರ ಮಾಡುತ್ತಿಯೆಂದು ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲದೇ 1 ನೇ ಆರೋಪಿ ಕೈಯಿಂದ ಕೆನ್ನೆಗೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಆಗ ಚಾಸಾ 1 ಬೊಬ್ಬೆ ಹಾಕಿದ್ದು ನಾನು ಹೊರಗೆ ಬಂದು ನನ್ನ ಮಗನಿಗೆ ಯಾಕೆ ಹೊಡೆಯುತ್ತೀರಿ ಎಂದು ಕೇಳಿದಾಗ ನನಗೆ ಅವಾಚ್ಯವಾಗಿ ಆರೋಪಿಗಳು ಬೈದಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿ ಕಲ್ಲಿನಿಂದ ಚಾಸಾ 1 ರವರಿಗೆ ಕಲ್ಲಿನಿಂದ ಹೊಡೆದಿದ್ದರು ಎಂದರೆ ಸರಿಯಲ್ಲ. ಆಗ ನಾನು ಕೂಗಿಕೊಂಡಿದ್ದು ಚಾಸಾ 4 ಮತ್ತು 5 ರವರು ಬಂದು ಮತ್ತೆ ಹೊಡೆಯುತ್ತಿರುವುದನ್ನು ತಪ್ಪಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಾಸಾ 4 ಮತ್ತು 5 ರವರಿಗೆ ಆ್ಯಂಬುಲನ್ಸ ಮೇಲೆ ಸರಕಾರಿ ಆಸ್ಪತ್ರೆಗೆ ದಾಖಲಿಸಿ ಉಪಚಾರ ಮಾಡಿರುತ್ತಾರೆ ಎಂದರೆ ನನಗೆ ಮಾಹಿತಿ

ಇಲ್ಲಾ. ನಂತರ ಚಾಸಾಡ 4 ಮತ್ತು 5 ಇವರಿಗೆ ಹೆಚ್ಚಿನ ಚಿಕಿಸ್ಸೆಗೆ ಹೊನ್ನಾವರದ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ನನಗೆ ಮಾಹಿತಿ ಇಲ್ಲಾ. ಘಟನೆ ನಡೆದಿದರೂ ಸಹ ಆರೋಪಿಗಳ ಜೊತೆ ರಾಜಿ ಮಾಡಿಕೊಂಡು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**